**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ ಪ್ರತಾಪಸಿಂಹ ನಾಯಕ್ ರವರು ಮಂಡಿಸಿರುವ ನಿಯಮ 330 ರಡಿ ಗಮನ ಸೆಳೆಯು ಸೂಚನೆ**

**ವಿಷಯ:**

**ರಾಜ್ಯದಲ್ಲಿ ಮೌಲ್ಯ ಶಿಕ್ಷಣವನ್ನು ಜಾರಿಗೊಳಿಸಲು ಮುಂದಾಗಿರುವ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ದೈಹಿಕ ಶಿಕ್ಷಣಕ್ಕೆ ಮೀಸಲಾಗಿದ್ದ ಅವಧಿಯಲ್ಲಿ ಮೌಲ್ಯಶಿಕ್ಷಣವನ್ನು ಕಲಿಸಲು ಮುಂದಾಗಿರುವುದರಿಂದ, ಭವಿಷ್ಯದ ಕ್ರೀಡಾಪಟುಗಳನ್ನು ಸೃಷ್ಟಿಸಬೇಕಾದ ಶಾಲೆಗಳಲ್ಲಿ, ದೈಹಿಕ ಶಿಕ್ಷಣ ಸಂಪೂರ್ಣವಾಗಿ ನೇಪಥ್ಯಕ್ಕೆ ಸರಿಯುವ ಆತಂಕ ಸೃಷ್ಟಿಯಾಗಿದೆ. ಮೌಲ್ಯ ಶಿಕ್ಷಣವೆಂಬ ನೆಪದಲ್ಲಿ ಮಕ್ಕಳನ್ನು ಕ್ಲಾಸ್ ರೂಮ್‌ನಲ್ಲಿ ಕೂರಿಸುವುದರಿಂದ ಶಿಕ್ಷಣದ ಮೂಲಕ ಮಕ್ಕಳ ಸರ್ವಾಂಗೀಣ ವಿಕಾಸ ಎಂಬ ಪರಿಕಲ್ಪನೆಗೆ ಕೊಡಲಿ ಪೆಟ್ಟು ಬೀಳಲಿದೆ. ಕೋವಿಡ್ ಬಳಿಕ ಮಕ್ಕಳು ಆನ್‌ಲೈನ್‌ನಲ್ಲೇ ಅತೀ ಹೆಚ್ಚು ಸಮಯ ಕಳೆಯುತ್ತಿದ್ದು, ಮಕ್ಕಳ ದೈಹಿಕ ಸಾಮರ್ಥ್ಯ ಗಣನೀಯವಾಗಿ ಕುಂದುತಿದ್ದು, ಈಗ ಈ ನಿರ್ಧಾರದಿಂದ ಮಕ್ಕಳ ಮನೋವಿಕಾಸ, ಸ್ಪರ್ಧಾ ಮನೋಭಾವ, ಆಟೋಟ ಮತ್ತು ಇತರೆ ರಚನಾತ್ಮಕ ಚಟುವಟಿಕೆಗಳಿಂದ ಅವರನ್ನು ಶಾಶ್ವತವಾಗಿ ದೂರ ಮಾಡಿ ಅವರನ್ನು ಬಲವಂತವಾಗಿ ಜಡತ್ವಕ್ಕೆ ದೂಡಿದಂತಾಗುತ್ತದೆ.**

**ಆಟ ಯೋಗಾಸನ, ಪಥ ಕವಾಯಿತು, ಕ್ರಿಯಾ ಆಟಗಳ ಮಾದರಿ ಮತ್ತು ಶ್ರೇಷ್ಠ ರೀತಿಯ ಸಂಯೋಜನೆ ಇರುವ ಹಾಗೂ ತಂಡ ಸ್ಫೂರ್ತಿ, ಶಿಸ್ತು, ನಿಯಮ ಬದ್ಧತೆಯನ್ನು ಪ್ರಧಾನವಾಗಿ ಕಲಿಸುತ್ತಿದ್ದ ದೈಹಿಕ ಶಿಕ್ಷಣ ವಿಷಯವನ್ನು ನೇಪಥ್ಯಕ್ಕೆ ಸರಿಸುವ ಸರ್ಕಾರದ ಈ ಅವೈಜ್ಞಾನಿಕ, ಅತಾರ್ಕಿಕವಾದ ನಿರ್ಧಾರದಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಸದನದಲ್ಲಿ ಪ್ರಸ್ತಾಪಿಸಲು ಬಯಸಿರುತ್ತಾರೆ.**

**ಉತ್ತರ:**

ಸರ್ಕಾರದ ಆದೇಶ ಸಂಖ್ಯೆ: ಇಪಿ 116 ಎಂಪಿಇ 2025 ದಿನಾಂಕ:02-02-2026ರ ಆದೇಶದಲ್ಲಿ ಸರ್ಕಾರಿ ಶಾಲೆಗಳ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣ ಪಠ್ಯವಸ್ತುವನ್ನು ಒಳಗೊಂಡಂತೆ ಮೌಲ್ಯ ಶಿಕ್ಷಣ ಪಠ್ಯ ಪುಸ್ತಕವನ್ನು ಮುದ್ರಿಸಿ ವಿತರಿಸುವ ಬಗ್ಗೆ ಆದೇಶಿಸಲಾಗಿರುತ್ತದೆ. ದೈಹಿಕ ಶಿಕ್ಷಣ ಮತ್ತು ಮೌಲ್ಯ ಶಿಕ್ಷಣ ಪಠ್ಯ ಪುಸ್ತಕಗಳನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ಲಭ್ಯಗೊಳಿಸಲಾಗುವುದು. ರಾಜ್ಯ ಪಠ್ಯಕ್ರಮ ಅನುಸರಿಸುವ ಖಾಸಗೀ ಶಾಲೆಗಳೂ ಸಹ ಸದರಿ ವಿವರವನ್ನು ಪಡೆದುಕೊಂಡು ದೈಹಿಕ ಶಿಕ್ಷಣ ಮತ್ತು ಮೌಲ್ಯ ಶಿಕ್ಷಣದ ಲಾಭ ಪಡೆದುಕೊಳ್ಳಬಹುದಾಗಿರುತ್ತದೆ. ಪ್ರಸ್ತುತ ಅನುದಾನ ರಹಿತ ಶಾಲೆಗಳು ಪಠ್ಯ ಪುಸ್ತಕಗಳನ್ನು ಕೊಳ್ಳುವ ವ್ಯವಸ್ಥೆಯಿದ್ದು ಮೌಲ್ಯ ಶಿಕ್ಷಣಕ್ಕೆ ಸದರಿ ಶಾಲೆಗಳು ತಮ್ಮ ಹಂತದಲ್ಲಿ ಕ್ರಮವಹಿಸಬಹುದಾಗಿರುತ್ತದೆ.

ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ 'ಸದೃಢವಾದ ದೇಹದಲ್ಲಿ ಆರೋಗ್ಯಯುತ ಮನಸ್ಸು' ಎನ್ನುವಂತೆ ಮಗುವಿನ ಸರ್ವಾಂಗೀಣ ಬೆಳವಣಿಗೆ ಮಾಡುವುದೇ ಶಿಕ್ಷಣದ ಗುರಿ. ಶಾರೀರಿಕ, ಬೌದ್ಧಿಕ, ಸಾಮಾಜಿಕ, ನೈತಿಕ ಶಿಕ್ಷಣವು ಪ್ರಮುಖವಾಗಿದ್ದು, ಸದರಿ ವಿಷಯದಲ್ಲಿ ಆಟ, ಯೋಗಾಸನ, ಪಥ ಕವಾಯತು, ಕ್ರೀಡೆ, ಮೌಲ್ಯಗಳು, ನೈರ್ಮಲ್ಯ ಆರೋಗ್ಯ ಮತ್ತು ಆಟಗಳ ಅವಧಿಗಳು ಎಂದಿನಂತೆ ಮುಂದುವರೆದಿರುತ್ತವೆ.

ರಾಜ್ಯವು ದೈಹಿಕ ಶಿಕ್ಷಣದಲ್ಲಿ ಆರೋಗ್ಯ, ಯೋಗ, ಕ್ರೀಡೆ, ಮೌಲ್ಯ ಮತ್ತು ನೈರ್ಮಲ್ಯದ ವಿಷಯಗಳನ್ನು ಸೇರ್ಪಡೆಗೊಳಿಸಿ ಸಮಗ್ರವಾಗಿ ದೈಹಿಕ ಶಿಕ್ಷಣವನ್ನು ಬೋಧಿಸುವ, ಕ್ರೀಡೆ ಸಂಘಟಿಸುವ ಕಾರ್ಯವನ್ನು ಗೌರವಿಸುತ್ತಾ ಬಂದಿರುತ್ತದೆ. ಸರ್ಕಾರದ ಆದೇಶದಂತೆ, ಪ್ರಸ್ತುತ ಮೌಲ್ಯ ಶಿಕ್ಷಣ ಪಠ್ಯಪುಸ್ತಕದಲ್ಲಿ ದೈಹಿಕ ಶಿಕ್ಷಣ ಪಠ್ಯ ಪುಸ್ತಕದಲ್ಲಿನ ಎಲ್ಲಾ ವಿಷಯಗಳ ತಾತ್ವಿಕ ಹಾಗೂ ಪ್ರಾಯೋಗಿಕ ಸಾರಂಶಗಳನ್ನು ಅಳವಡಿಸಲಾಗಿರುತ್ತದೆ. ಚಾಲ್ತಿಯಲ್ಲಿದ್ದ ದೈಹಿಕ ಶಿಕ್ಷಣ ಪಠ್ಯ ಪುಸ್ತಕಗಳನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ಲಭ್ಯಗೊಳಿಸಲಾಗುವುದು. ಶಾಲಾ ತರಗತಿ ಪ್ರಕ್ರಿಯೆಯಲ್ಲಿ ದೈಹಿಕ ಶಿಕ್ಷಣದ ಅವಧಿಗಳು ನಿರಂತರವಾಗಿ ಮುಂದುವರೆಯುತ್ತವೆ. ದೈಹಿಕ, ಪಠ್ಯವಸ್ತುವಿಗೆ ಯಾವುದೇ ಧಕ್ಕೆಯಾಗದಂತೆ ಪ್ರತಿಪಾಠದ ಸಾರಾಂಶವನ್ನೂ ಪುಸ್ತಕಗಳು ಒಳಗೊಂಡಿರುತ್ತವೆ.

ಮೌಲ್ಯ ಶಿಕ್ಷಣ ಪಠ್ಯದಲ್ಲಿನ ದೈಹಿಕ, ಆರೋಗ್ಯ ಹಾಗೂ ಯೋಗ ವಿಷಯಗಳಿಗೆ ಸಂಬಂಧಿಸಿದಂತೆ, ದೈಹಿಕ ಶಿಕ್ಷಣ ಶಿಕ್ಷಕರೇ ಬೋಧನೆಯನ್ನು ಕೈಗೊಳ್ಳಬೇಕಿರುತ್ತದೆ. ಉಳಿದ ಮೌಲ್ಯ ವಿಷಯಗಳನ್ನು ಆಯಾ ವಿಷಯಕ್ಕೆ ಸಂಬಂಧಿಸಿದ ಶಿಕ್ಷಕರ ಮೂಲಕ ಕಲಿಕೆಯನ್ನು ಅನುಕೂಲಿಸಲು ಯೋಜಿಸಲಾಗಿದೆ. ಮಕ್ಕಳ ಕ್ರೀಡಾ ಅವಧಿಗಳು ಎಂದಿನಂತೆಯೇ ಮುಂದುವರೆದಿರುತ್ತವೆ.

ಈ ಹಿಂದಿನಂತೆಯೇ ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡಿ ದೈಹಿಕ ಶಿಕ್ಷಣದೊಂದಿಗೆ ಮೌಲ್ಯ ಶಿಕ್ಷಣವನ್ನು ಒಳಗೊಂಡಂತೆ ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಕ್ರಮವಹಿಸುವ ನಿಟ್ಟಿನಲ್ಲಿ ಮೌಲ್ಯ ಶಿಕ್ಷಣ ಪಠ್ಯ ಪುಸ್ತಕದ ಮುಖಪುಟದಲ್ಲಿ ಮುಖಪುಟದ ಶೀರ್ಷಿಕೆಯನ್ನು ಮೌಲ್ಯ ಶಿಕ್ಷಣ (ದೈಹಿಕ, ಮಾನಸಿಕ, ಸಾಮಾಜಿಕ ಶಿಕ್ಷಣ) ಎಂದು ನಮೂದಿಸಿ ಎಲ್ಲಾ ಆಯಾಮಗಳಿಗೂ ಒತ್ತು ನೀಡಲಾಗಿದೆ.

**ಸಂಖ್ಯೆ: ಇಪಿ 104 ಎಸ್‌ಇಎಸ್ 2026**

**(ಎಸ್ ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು**